# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,
# ಸಕಲೇಶಪುರ
# C .C.No. 549/2023

| | | |
|---|---|---|
| **ಹೆಸರುಃ** | **ವಿಶ್ವನಾಥ** | **DW-2** |
| **ತಂದೆ/ಗಂಡ ಹೆಸರುಃ** | **ಬಸವರಾಜು** | |
| **ವಯಸ್ಸುಃ** | **36 ವರ್ಷ** | |
| **ವೃತ್ತಿಃ** | **ವ್ಯವಸಾಯ** | |
| **ವಿಳಾಸಃ** | **ಕೋಗೋಡು ಗ್ರಾಮ ,<br>ಬೇಲೂರು ತಾಲ್ಲೂಕು.** | **ದಿನಾಂಕಃ26.03.2026** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಪಿ ಎನ್ ವಕೀಲರಿಂದ**

ನನಗೆ ಆರೋಪಿ ಪರಿಚಯವಿರುತ್ತಾರೆ. ಅವರು ನನ್ನ ದೂರದ ಸಂಬಂಧಿ ಇರುತ್ತಾರೆ. ಆರೋಪಿಗೆ 2017 ರಲ್ಲಿ ಅಪಘಾತವಾಗಿತ್ತು. ಆಗ ಅವರನ್ನು ನೋಡಲು ಹಾಸನದ ಜನಪ್ರಿಯ ಆಸ್ಪತ್ರೆಗೆ ಹೋಗಿದ್ದೆ. ಆಗ ಆರೋಪಿಯ ಗಂಡ ಮತ್ತು ಗೋಪಿನಾಥ ರವರು ಜಗಳ ಮಾಡಿಕೊಳ್ಳುತ್ತಿದ್ದರು. ನಾನು ನೋಡಲು ಹೋದಾಗ ಅವರು ಹಣಕಾಸಿನ ವಿಚಾರವಾಗಿ ದಾಖಲಾತಿ ಕೊಡಿ ಎಂದು ಕೇಳಿದರು. ಆಗ ಆರೋಪಿಯ ಗಂಡ ಗೋಪಿನಾಥ ರವರಿಗೆ ಒಂದು ಚೆಕ್ ಕೊಡುತ್ತಿದ್ದರು. ಆಗ ಗೋಪಿನಾಥ ರವರು ಪೂರ ಬ್ಯಾಗ್ ನ್ನು ತೆಗೆದುಕೊಳ್ಳುತ್ತಾರೆ. ಬ್ಯಾಗ್ ನಲ್ಲಿ ಸುಮಾರು 3-4 ಬ್ಯಾಂಕ್ ಗಳ ಸಹಿ ಮಾಡಿದ ಚೆಕ್ ಗಳು ಇದ್ದವು. ಹಣಕಾಸಿನ ವ್ಯವಹಾರ ಮುಗಿದ ನಂತರ ಚೆಕ್ ಗಳನ್ನು ವಾಪಸ್ಸು ಕೊಡುವುದಾಗಿ ಹೇಳಿ ಗೋಪಿನಾಥ ರವರು

**ಆರೋಪಿಯ ಗಂಡನಿಂದ ಚೆಕ್ ಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಅದೇ ಚೆಕ್ ಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ.**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

ಪ್ರಧಾನ **ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**